**ದಿನಾಂಕಃ 09.06.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಟಿ.ಡಿ ವಕೀಲರಿಂದಃ

ನನ್ನ ಜನ್ಮ ದಿಃ29.03.1985. ನಾನು ಮೂಲತಃ ಕಂಭತ್ತನಹಳ್ಳಿ ಗ್ರಾಮದ ನಿವಾಸಿ. ನನ್ನ ಎಲ್ಲಾ ದಾಖಲೆಗಳು ಕಂಭತ್ತನಹಳ್ಳಿ ಗ್ರಾಮದ ವಿಳಾಸಕ್ಕೆ ಸೇರಿರುತ್ತವೆ. ಆದರೆ ನಾನು ಸಮಾರು 4 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನಾನು ಮೊದಲು ವ್ಯವಸಾಯ ಮಾಡುತ್ತಿದ್ದೇನು. ಸುಮಾರು 2.1/5 ವರ್ಷಗಳಿಂದ ಸೆಕ್ಯೂರಿಟಿ ಗಾರ್ಡ್ ಕಂಪನಿಯಲ್ಲಿ ಫೀಲ್ಡ್ ಆಫೀಸರ್ ಆಗಿ ಕೆಲಸ ಮಾಡುತ್ತಿರುತ್ತೇನೆ.

2. ಈ ಹಂತದಲ್ಲಿ ಸಾಕ್ಷಿಗೆ ನಿಪಿ-5 ರಲ್ಲಿನ 2 ನೇ ಸಾಕ್ಷಿದಾರರ ಸಹಿಯನ್ನು ತೋರಿಸಿ ಸದರಿ ಸಹಿ ನಿಮ್ಮದೇ ಎಂದು ಸೂಚಿಸಲಾಗಿ ಸಾಕ್ಷಿ ಅದನ್ನು ನಿರಾಕರಿಸಿರುತ್ತಾರೆ. 2008 ರಲ್ಲಿ ನಿಪಿ-5 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿದರು ಸಹ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಕಂಭತ್ತನಹಳ್ಳಿಯಿಂದ ಕಾರುಮರಡಿ ಗ್ರಾಮ 1 ಕಿ.ಮೀ ದೂರದಲ್ಲಿ ಇರುತ್ತದೆ. ಕಾರುಮರಡಿ ಗ್ರಾಮ ಯಾವ ಸರ್ವೆ.ನಂಬರ್ ನಲ್ಲಿ ಯಾರು ಸ್ವಾಧೀನದಲ್ಲಿ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

3. ದಾವಾ ಸ್ವತ್ತಿನ ಸರ್ವೆ.ನಂಬರ್, ವಿಸ್ತೀರ್ಣ ಮತ್ತು ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತನ್ನು ನಾನು ನೋಡಿರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ನರಸಮ್ಮರವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯ ತಂದೆ ತಾಯಿಯ ಪೆಸರು ನನಗೆ ಗೊತ್ತಿರುವುದಿಲ್ಲ. ನಿಪಿ-5 ರ ಕರಾರುಪತ್ರದ ಬಗ್ಗೆ ನನಗೆ ಮಾಹಿತಿ

09/6/2026

ಇದ್ದರು ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ಸಮಕ್ಷಮ ನಿಪಿ-5 ರಂತೆ ಕರಾರುಪತ್ರ ತಯಾರಿಸಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ನನಗೆ ಕನ್ನಡ ಭಾಷೆ ಓದಲು ಬರುತ್ತದೆ. ಇಂಗ್ಲೀಷ್ ಭಾಷೆ ಓದಲು ಬರುವುದಿಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆ ಮೇರೆಗೆ ತಯಾರಿಸಿರುತ್ತಾರೆ ನಾನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ಏನು ಬರೆಸಿರುತ್ತೇನೆ ಎಂದು ಈಗ ನೆನಪಿರುವುದಿಲ್ಲ. ಪ್ರತಿವಾದಿ ನನ್ನ ಸಂಬಂಧಿಕರು ಆಗಿರುವುದಿಲ್ಲ.

4. ನಿಪಿ-5 ರ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದ್ದರೂ ಸಹ ಪ್ರತಿವಾದಿಯ ಹೇಳಿಕೆ ಮೇರೆಗೆ ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

09/6/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ